# Akashvani : Bangalore
# National Bulletin In Kannada
# 18.05.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

<u>ಮುಖ್ಯಾಂಶಗಳು</u>

**೧. ಲೋಕಸಭೆ ಐದನೇ ಹಂತದ ಚುನಾವಣೆ; ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳಿಂದ ರ್‍ಯಾಲಿ- ರೋಡ್ ಶೋ. ಕಾಂಗ್ರೆಸ್ ಮತ್ತು ಐಎನ್‌ಡಿಐ ಮೈತ್ರಿಕೂಟಗಳು ಭ್ರಷ್ಟ ಹಾಗೂ ಹಗರಣಯುತ ಗುಂಪುಗಳು - ಪ್ರಧಾನಮಂತ್ರಿ ನರೇಂದ್ರ ಮೋದಿ ಟೀಕೆ**

**೨. ಚುನಾವಣಾ ಭಾಷಣದ ಮೂಲಕ ಪ್ರಧಾನಿಯವರಿಂದ ಸಮಾಜ ವಿಭಜನೆ ಯತ್ನ- ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪಾದನೆ- ಮುಕ್ತಾಯಗೊಂಡ ಬಹಿರಂಗ ಪ್ರಚಾರ**

**೩. ಮತದಾನಕ್ಕೆ ಆಮಿಷ ತಡೆಗಟ್ಟಲು ಚುನಾವಣಾ ಆಯೋಗದಿಂದ ಕ್ರಮ; ಇದುವರೆಗೆ ಸುಮಾರು ೯ ಸಾವಿರ ಕೋಟಿ ರೂಪಾಯಿ ಮೌಲ್ಯದ ವಸ್ತು ವಶ**

**೪. ಥಾಯ್ಲೆಂಡ್ ಓಪನ್ ಬ್ಯಾಡ್‌ಮಿಂಟನ್ ಟೂರ್ನಿ; ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ಜೋಡಿ ಫೈನಲ್ ಪ್ರವೇಶ.**

**೫. ಐಪಿಎಲ್ ಕ್ರಿಕೆಟ್: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು - ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿ**

**<><*<><>*><>**

ಲೋಕಸಭೆಯ ಐದನೇ ಹಂತದ ಚುನಾವಣೆ ನಿಗದಿಯಾಗಿರುವ ಕ್ಷೇತ್ರಗಳಲ್ಲಿಂದು ವಿವಿಧ ರಾಜಕೀಯ ಪಕ್ಷಗಳಿಂದ ಬಿರುಸಿನ ರ್‍ಯಾಲಿ, ರೋಡ್ ಶೋ ನಡೆಯಿತು.

**<><*<><>*><>**

ಕಾಂಗ್ರೆಸ್ ಮತ್ತು ಐಎನ್‌ಡಿಐ ಮೈತ್ರಿಕೂಟಗಳು ಭ್ರಷ್ಟ ಹಾಗೂ ಹಗರಣಯುತ ಗುಂಪುಗಳಾಗಿವೆ ಎಂದು ಪ್ರಧಾನಮಂತ್ರಿ ಹಾಗೂ ಹಿರಿಯ ಬಿಜೆಪಿ ಧುರೀಣ ನರೇಂದ್ರ ಮೋದಿ ಟೀಕಿಸಿದ್ದಾರೆ. ಅವರು, ಹರಿಯಾಣದ ಸೋನಿಪತ್‌ನಲ್ಲಿಂದು ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿ, ಕೇಂದ್ರ

ಸರ್ಕಾರ ತನ್ನ ಅವಧಿಯಲ್ಲಿ ಜಮ್ಮು-ಕಾಶ್ಮೀರದಿಂದ ೩೭೦ನೇ ಆರ್ಟಿಕಲ್ ಅನ್ನು ರದ್ದುಗೊಳಿಸಿದೆ. ಒಲಿಂಪಿಕ್‌ನಲ್ಲಿ ಪದಕ ಪಡೆಯುವಂತೆ ಕ್ರೀಡಾ ಕ್ಷೇತ್ರವನ್ನು ಬಲಗೊಳಿಸಿದೆ ಎಂದು ಹೇಳಿದರು. ಇದಕ್ಕೂ ಮುನ್ನ ನರೇಂದ್ರ ಮೋದಿ, ಅಂಬಾಲದಲ್ಲಿ ಪಕ್ಷದ ಅಭ್ಯರ್ಥಿಯ ಪರ ಮತಯಾಚಿಸಿದರು. ದೇಶದಲ್ಲಿ ಬಲಿಷ್ಠ ಸರ್ಕಾರ ಇರುವಾಗ ನಮ್ಮ ವಿರುದ್ಧ ಏನೇ ಮಾಡುವಾಗ ವೈರಿಗಳು ನೂರು ಬಾರಿ ಯೋಚಿಸುತ್ತಾರೆ. ಪಾಕಿಸ್ತಾನ, ಕಳೆದ ೭೦ ವರ್ಷಗಳಿಂದ ಭಾರತಕ್ಕೆ ತೊಂದರೆ ಕೊಡುತ್ತಲೇ ಬಂದಿದೆ. ಕೈಯಲ್ಲಿ ಬಾಂಬ್ ಹಿಡಿದುಕೊಂಡಿದ್ದ ಪಾಕಿಸ್ತಾನ ಈಗ ಯಾಚನೆಯ ಬಟ್ಟಲನ್ನು ಹಿಡಿದುಕೊಂಡಿದೆ ಎಂದು ಪ್ರಧಾನಿ ಹೇಳಿದರು. ತಮ್ಮ ಸರ್ಕಾರ, ಸೇನಾಪಡೆಯನ್ನು ಬಲಿಷ್ಠಗೊಳಿಸಿದೆ ಎಂದು ಹೇಳಿದ ನರೇಂದ್ರ ಮೋದಿ, ಕಾಂಗ್ರೆಸ್, ಸೇನಾ ಸಿಬ್ಬಂದಿಗೆ ಒಂದು ರ್‍ಯಾಂಕ್, ಒಂದು ಪಿಂಚಣಿ ನೀಡಿರಲಿಲ್ಲ. ತಮ್ಮ ಸರ್ಕಾರ ಸೇನಾ ಸಿಬ್ಬಂದಿಗೆ ಈ ಸೌಕರ್ಯ ಒದಗಿಸಿದೆ ಎಂದರು.

<><*<><>*><>

ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ೨೫ ಕೋಟಿಗೂ ಅಧಿಕ ಜನರನ್ನು ಬಡತನ ರೇಖೆಯಿಂದ ಹೊರತಂದಿದ್ದು, ಸರ್ಕಾರ ಕೈಗೊಂಡಿರುವ ವಿವಿಧ ಉಪಕ್ರಮಗಳ ಬಗ್ಗೆ ವಿಶ್ವಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿದೆ ಎಂದು ಹಿರಿಯ ಬಿಜೆಪಿ ನಾಯಕ ರಾಜನಾಥ್ ಸಿಂಗ್ ಹೇಳಿದ್ದಾರೆ. ಅವರು, ಉತ್ತರಪ್ರದೇಶದ ಬಸ್ತಿ ಜಿಲ್ಲೆಯಲ್ಲಿಂದು ರಾಜಕೀಯ ರ್‍ಯಾಲಿ ಉದ್ದೇಶಿಸಿ ಮಾತನಾಡಿ, ಭಾರತದ ಬಗೆಗಿದ್ದ ಪರಿಕಲ್ಪನೆ ಬದಲಾಗಿದೆ. ೨೧ನೇ ಶತಮಾನ ಭಾರತಕ್ಕೆ ಸೇರಿದ್ದೆಂದು ವಿಶ್ವದ ಜನರು ಹೇಳುತ್ತಿದ್ದಾರೆ - ಎಂದರು. ಗೃಹ ಸಚಿವ ಹಾಗೂ ಹಿರಿಯ ಬಿಜೆಪಿ ಧುರೀಣ ಅಮಿತ್ ಶಾ, ಝೂನ್ಸಿಯಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಬಿಜೆಪಿ ನಾಲ್ಕು ಹಂತದ ಚುನಾವಣೆಗಲ್ಲಿ ಈಗಾಗಲೇ ೨೭೦ ಸ್ಥಾನಗಳನ್ನು ಗಳಿಸಿ, ಮುನ್ನೂರರತ್ತ ಮುನ್ನುಗ್ಗುತ್ತಿದೆ ಎಂದು ಹೇಳಿದರು. ಐಎನ್‌ಡಿಐ ಮೈತ್ರಿಕೂಟ ಕೇವಲ ಕುಟುಂಬ ಕೇಂದ್ರಿತ ಮೈತ್ರಿಯಾಗಿದೆ ಎಂದು ಟೀಕಿಸಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಚುನಾವಣಾ ಭಾಷಣದ ಮೂಲಕ ಸಮಾಜವನ್ನು ವಿಭಜಿಸಲು ಯತ್ನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪಾದಿಸಿದ್ದಾರೆ. ಅವರು, ಮುಂಬೈನಲ್ಲಿಂದು ಐಎನ್‌ಡಿಐ ಪರ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಮೋಸ ಹಾಗೂ ಸಂಚಿನ ಆಧಾರದ ಮೇಲೆ ರಾಜ್ಯದಲ್ಲಿ ಮಾಹಾಯುತಿ ಸರ್ಕಾರ ರಚಿಸಲಾಗಿದೆ ಎಂದು ಆರೋಪಿಸಿದರು. ಬಿಜೆಪಿ ಮಹಾರಾಷ್ಟ್ರದಲ್ಲಿ ಪ್ರಮುಖ ರಾಜಕೀಯ ಪಕ್ಷಗಳನ್ನು ಒಡೆದಿದ್ದೇ ಅಲ್ಲದೆ,

ಅವುಗಳಿಗೆ ಪಕ್ಷದ ಚಿನ್ಹೆ ದೊರಕದಂತೆ ಮಾಡಿದೆ ಎಂದು ದೂರಿದರು. ಎನ್‌ಸಿಪಿ- ಎಸ್‌ಪಿ ಮುಖ್ಯಸ್ಥ ಶರದ್ ಪವಾರ್ ಅವರು ಮಾತನಾಡಿ, ನಿರುದ್ಯೋಗದಂತಹ ವಿಚಾರಗಳಿಂದ ಜನರ ಲಕ್ಷ್ಯವನ್ನು ಬೇರೆಡೆ ಸೆಳೆಯಲು ಪಾಕಿಸ್ತಾನದ ವಿಚಾರವನ್ನು ಐಎನ್‌ಡಿಐ ಮೈತ್ರಿಕೂಟದೊಂದಿಗೆ ಸೇರಿಸಲಾಗುತ್ತಿದೆ ಎಂದು ದೂರಿದರು. ಶಿವಸೇನಾ ಯುಬಿಟಿ ಮುಖ್ಯಸ್ಥ ಉದ್ದವ್ ಠಾಕ್ರೆ, ಎನ್‌ಡಿಎ ಮಹಾರಾಷ್ಟ್ರವನ್ನು ವಂಚಿಸುತ್ತಿದೆ ಎಂದು ಆಪಾದಿಸಿದರು. ತಮ್ಮ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮಹಾರಾಷ್ಟ್ರದಿಂದ ಉದ್ದಿಮೆಗಳು ಬೇರೆಡೆ ಹೋಗುವುದನ್ನು ತಡೆಗಟ್ಟುವುದಾಗಿ ಹೇಳಿದರು. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, ಶ್ರವಸ್ತಿ, ಫೈಝಾಬಾದ್, ಸುಲ್ತಾನ್‌ಪುರ್ ಮತ್ತು ಅಂಬೇಡ್ಕರ್ ನಗರಗಳಲ್ಲಿ ರಾಜಕೀಯ ಸಮಾವೇಶ ಉದ್ದೇಶಿಸಿ ಮಾತನಾಡಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಾರಾಬಂಕಿ ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ನಡೆಸಿ ಮತಯಾಚಿಸಿದರು. ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿಯವರು, ಬಸ್ತಿಯಲ್ಲಿ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಮಾತನಾಡಿದರು.

<><*<><>*><>

ಐದನೇ ಹಂತದಲ್ಲಿ ಚುನಾವಣೆ ನಡೆಯಲಿರುವ ಲೋಕಸಭಾ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ಇಂದು ಸಂಜೆ ತೆರೆ ಬಿದ್ದಿದೆ. ಐದನೇ ಹಂತದಲ್ಲಿ ೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನೊಳಗೊಂಡ ೪೯ ಲೋಕಸಭಾ ಕ್ಷೇತ್ರಗಳಲ್ಲಿ ಇದೇ ಸೋಮವಾರ ಮತದಾನ ಬೆಳಿಗ್ಗೆ ೭ ರಿಂದ ಸಂಜೆ ೬ ರವರೆಗೆ ನಡೆಯಲಿದೆ.

<><*<><>*><>

ಐದನೇ ಹಂತದಲ್ಲಿ ಜಮ್ಮು-ಕಾಶ್ಮೀರದ ಬಾರಮುಲ್ಲಾ- ಕುಪ್ವಾರಾ ಲೋಕಸಭಾ ಕ್ಷೇತ್ರದಲ್ಲಿ ಸೋಮವಾರ ಮತದಾನ ನಡೆಯಲಿದ್ದು, ಮತದಾನ ಪ್ರಮಾಣ ಹೆಚ್ಚಿಸಲು ಚುನಾವಣಾ ಆಯೋಗ ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ.  ಈ ಕ್ಷೇತ್ರದಲ್ಲಿ ನೊಂದಾಯಿತ ೨೬ ಸಾವಿರ ಕಾಶ್ಮೀರಿ ಪಂಡಿತ ಮತದಾರರಲ್ಲಿ ಪೈಕಿ ೧೮ ಸಾವಿರಕ್ಕೂ ಅಧಿಕ ವಲಸೆ ಮತದಾರರು ಸೇರಿದ್ದಾರೆ. ಈ ಮತಕ್ಷೇತ್ರದಲ್ಲಿ ವಲಸೆ ಮತದಾರರಿಗಾಗಿಯೇ ೨೯ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಇವರಿಗಾಗಿ ಬೆಳಿಗ್ಗೆ ೬ ರಿಂದ ಸಂಜೆ ೬ ರವರೆಗೆ ವಾಹನ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ ಎಂದು ನಮ್ಮ ಜಮ್ಮು ಪ್ರತಿನಿಧಿ ತಿಳಿಸಿದ್ದಾರೆ.

<><*<><>*><>

ಲಡಾಖ್ ಪ್ರದೇಶದಲ್ಲಿ ಐದನೇ ಹಂತದ ಚುನಾವಣೆಗಾಗಿ ಶಾಂತಿ ಹಾಗೂ ನ್ಯಾಯಯುತ ಮತದಾನಕ್ಕಾಗಿ ವ್ಯಾಪಕ ವ್ಯವಸ್ಥೆ ಮಾಡಲಾಗಿದೆ. ಕಾರ್ಗಿಲ್‌ನ ಖ್ರೀ ಸುಲ್ತಾನ್ ಚೌ ಕ್ರೀಡಾಂಗಣದಿಂದ ಎಲ್ಲ ೪೪ ಮತಗಟ್ಟೆಗಳ ಸಿಬ್ಬಂದಿಯನ್ನು ಇಂದು ಲಡಾಖ್‌ಗಾಗಿ ಕಳುಹಿಸಿಕೊಡಲಾಯಿತು. ಫೆಮಾ, ರಲಕುನ್ ಮತ್ತು ಶಾಡೇಗಳಂತಹ ಅತಿ ದೂರದ ಪ್ರದೇಶಗಳ ಮತಗಟ್ಟೆ ಸಿಬ್ಬಂದಿಗಳನ್ನು ಸೇನೆಯ ಹೆಲಿಕಾಪ್ಟರ್ ಮೂಲಕ ನಿನ್ನೆಯೇ ಆಯ ಸ್ಥಳಗಳಿಗೆ ರವಾನಿಸಲಾಗಿದೆ.

<><*<><>*><>

ಭಾರತದ ಚುನಾವಣಾ ಆಯೋಗ, ನ್ಯಾಯಯುತ ಹಾಗೂ ಪಾರದರ್ಶಕ ಚುನಾವಣೆ ನಿರ್ವಹಣೆಗಾಗಿ ಮತ್ತು ಆಮಿಷ ತಡೆಗಟ್ಟಲು ಇದುವರೆಗೆ ಸುಮಾರು ೮ ಸಾವಿರದ ೮೮೯ ಕೋಟಿ ರೂಪಾಯಿ ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ. ಇದರಲ್ಲಿ ಮಾದಕ ದ್ರವ್ಯ, ಮದ್ಯ, ಉಡುಗೊರೆ, ನಗದು, ಚಿನ್ನ, ಬೆಳ್ಳಿ, ವಜ್ರ ಹಾಗೂ ಮೌಲ್ಯಯುತ ಲೋಹಗಳು ಸೇರಿವೆ. ಮತದಾರರನ್ನು ಆಮಿಷಕ್ಕೆ ಒಡ್ಡಬಹುದಾದ ಈ ವಸ್ತುಗಳನ್ನು ಪ್ರಸ್ತುತ ಚುನಾವಣಾ ಅವಧಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ. ದೇಶದಲ್ಲೇ ಅತ್ಯಧಿಕ, ಗುಜರಾತ್ ರಾಜ್ಯದಲ್ಲಿ ಸುಮಾರು ೧ ಸಾವಿರದ ೬೬೧ ಕೋಟಿ ರೂಪಾಯಿ ಹಾಗೂ ರಾಜಸ್ಥಾನದಲ್ಲಿ ೧ ಸಾವಿರದ ೧೩೩ ಕೋಟಿ ರೂಪಾಯಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಜ್ಯ ಪೊಲೀಸ್, ಭಾರತೀಯ ಕರಾವಳಿ ಪಡೆ, ಕ್ಷಿಪ್ರಪಡೆ, ಮಾದಕ ದ್ರವ್ಯ ನಿಯಂತ್ರಣ ಬ್ಯುರೋ ಮೊದಲಾದ ತಂಡಗಳ ನೆರವಿನಿಂದ ದಾಳಿ ನಡೆಸಿ, ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

<><*<><>*><>

೭ನೇ ಹಾಗೂ ಕೊನೆಯ ಹಂತದ ಲೋಕಸಭಾ ಚುನಾವಣೆಗೆ ಸಲ್ಲಿಸಿರುವ ನಾಮಪತ್ರಗಳನ್ನು ಹಿಂಪಡೆಯಲು ಅಭ್ಯರ್ಥಿಗಳಿಗೆ ನಿನ್ನೆ ಕೊನೆಯ ದಿನವಾಗಿತ್ತು. ಈ ಹಂತದಲ್ಲಿ ಏಳು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಒಂದು ಸೇರಿದಂತೆ ಒಟ್ಟು ೫೭ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಉತ್ತರಪ್ರದೇಶ ಮತ್ತು ಪಂಜಾಬ್‌ನ ತಲಾ ೧೩, ಪಶ್ಚಿಮ ಬಂಗಾಳದ ೯, ಬಿಹಾರದ ೮, ಒಡಿಶಾದ ೬, ಹಿಮಾಚಲ ಪ್ರದೇಶದ ೪, ಜಾರ್ಖಂಡ್‌ನ ೩ ಹಾಗೂ ಕೇಂದ್ರಾಡಳಿತ ಪ್ರದೇಶ ಚಂಡೀಗಢದ ೧ ಕ್ಷೇತ್ರಕ್ಕೆ ಜೂನ್ ೧ ರಂದು ಮತದಾನ ಜರುಗಲಿದೆ. ಎಲ್ಲಾ ಹಂತಗಳ ಮತ ಎಣಿಕೆ ಕಾರ್ಯ ಜೂನ್ ೪ ರಂದು ನಡೆಯಲಿದೆ.

<><*<><>*><>

ಆಮ್‌ಆದ್ಮಿ ಪಕ್ಷದ ಸಂಸತ್ ಸದಸ್ಯೆ ಸ್ವಾತಿ ಮಾಲೀವಾಲ್ ಅವರ ಮೇಲಿನ ಹಲ್ಲೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮುಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರನ್ನು ದೆಹಲಿ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಈ ತಿಂಗಳ ೧೩ ರಂದು ಕೇಜ್ರಿವಾಲ್ ಅವರ ನಿವಾಸದಲ್ಲಿ ಬಿಭವ್ ಕುಮಾರ್ ತಮ್ಮ ಮೇಲೆ ಕಿರುಕುಳ ಹಾಗೂ ದೌರ್ಜನ್ಯ ನಡೆಸಿದರು ಎಂದು ಆಪಾದಿಸಿ ಸ್ವಾತಿ ಮಾಲೀವಾಲ್ ದೂರು ನೀಡಿದ್ದರು. ಘಟನಾ ದಿನದಂದು ಸ್ವಾತಿ ಮಾಲೀವಾಲ್ ಅವರು, ಮುಖ್ಯಮಂತ್ರಿ ನಿವಾಸಕ್ಕೆ ಅಕ್ರಮ ಪ್ರವೇಶ ಮಾಡಿದ್ದರೆಂದು ಬಿಭವ್ ಕುಮಾರ್ ಅವರೂ ಕೂಡ ದೂರು ನೀಡಿದ್ದಾರೆ.

<><*<><>*><>

ಶ್ರೀಲಂಕಾದ ಸೀತಾ ಇಳಿಯಾದಲ್ಲಿರುವ ಸೀತಾಮಾತೆ ಮಂದಿರದಲ್ಲಿ ನಾಳೆ ಕುಂಭಾಭಿಷೇಕ ನಡೆಯಲಿದ್ದು, ಸಡಗರ ಸಂಭ್ರಮ ನೆಲೆಗೊಂಡಿದೆ.  ಅಯೋಧ್ಯೆಯಿಂಧ ರವಾನಿಸಲಾದ ಸರಯು ನದಿಯ ೨೫ ಲೀಟರ್ ಪವಿತ್ರ ಜಲವನ್ನು ಕೊಲಂಬೊದಿಂದ ರಥದ ಮೂಲಕ ಸೀತಾಮಾತೆ ಮಂದಿರಕ್ಕೆ ತರಲಾಗಿದೆ. ತಿರುಮಲ ತಿರುಪತಿ ದೇವಸ್ಥಾನದಿಂದ ೫ ಸಾವಿರ ಲಡ್ಡುಗಳನ್ನು ಕಳುಹಿಸಲಾಗಿದೆ. ಈ ಶುಭ ಸಂದರ್ಭವನ್ನು ವೀಕ್ಷಿಸಲು ಭಾರತ ಹಾಗೂ ನೇಪಾಳ ದೇಶಗಳ ವಿವಿಧ ಭಾಗಗಳಿಂದ ಭಕ್ತಾದಿಗಳು ತೆರಳಿದ್ದಾರೆ. ರಾವಣ, ಸೀತಾಮಾತೆಯನ್ನು ಅಪಹರಿಸಿ ಬಂಧನದಲ್ಲಿಟ್ಟ ಈ ಸ್ಥಳ ಸೀತಾ ಇಳಿಯಾ ಅಥವಾ ಅಶೋಕ ವಾಟಿಕಾ ಎಂದೇ ಪ್ರಸಿದ್ಧಿಯಾಗಿದೆ.

<><*<><>*><>

ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಜೋಡಿ ಥಾಯ್ಲೆಂಡ್ ಓಪನ್ ಬ್ಯಾಡ್‌ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಫೈನಲ್ ಪ್ರವೇಶಿಸಿದೆ.  ಬ್ಯಾಂಕಾಕ್‌ನಲ್ಲಿಂದು ಮಧ್ಯಾಹ್ನ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಈ ಜೋಡಿ, ತೈವಾನಿನ ಎಂ.ಸಿ.ಲು ಮತ್ತು ತಾಂಗ್ ಕೈ ವಿಯ್ ಜೋಡಿಯನ್ನು ೨೧-೧೧, ೨೧-೧೨ ನೇರ ಪಂದ್ಯಗಳಿಂದ ಸೋಲಿಸಿತು. ನಾಳೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ, ಚೀನಾದ  ಚೆನ್ ಬೊಯಾಂಗ್ ಮತ್ತು ತೈವಾನಿನ ಲಿವ್ ಯಿ ತಂಡವನ್ನು ಎದುರಿಸಲಿದೆ.

<><*<><>*><>

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ. ಬೆಂಗಳೂರು ಹಾಗೂ ಚೆನ್ನೈ ತಂಡಗಳಿಗೆ ಪ್ಲೇ ಆಫ್ ಹಂತ ತಲುಪಲು ಈ ಪಂದ್ಯ ನಿರ್ಣಾಯಕವಾಗಿದೆ. ಈ ಪಂದ್ಯ ಗೆಲ್ಲುವುದರಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಅಗ್ರ ನಾಲ್ಕರಲ್ಲಿ ಒಂದು ಸ್ಥಾನ ಲಭಿಸಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಪಂದ್ಯ ಗೆಲ್ಲುವುದು ಅತ್ಯಗತ್ಯವಾಗಿದ್ದು, ನಂತರ ಸ್ಕೋರ್ ಹಾಗೂ ನಿವ್ವಳ ರನ್‌ರೇಟ್ ಆಧಾರದ ಮೇಲೆ ಪ್ಲೇ ಆಫ್ ಸ್ಥಾನ ನಿರ್ಧಾರವಾಗಲಿದೆ.

**<><*<><>*><>**

ಕೇರಳದಲ್ಲಿ ಮುಂದಿನ ಮೂರು ನಾಲ್ಕು ದಿನ ತೀವ್ರ ಮಳೆಯಾಗಲಿದ್ದು, ಈ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಿಗೆ ಎಚ್ಚರಿಕೆ ನೀಡಲಾಗಿದೆ. ಪಥನಮ್‌ತಿಟ್ಟ, ಇಡುಕಿ ಮತ್ತು ಮಲಪುರಮ್‌ಗಳಲ್ಲಿ ಇಂದು ಭಾರೀ ಮಳೆ ನಿರೀಕ್ಷಿಸಲಾಗಿದ್ದು, ನಾಳೆಯೂ ಕೂಡ ಈ ಪ್ರದೇಶಗಳಲ್ಲಿ ಭಾರೀ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲಿ ರೆಡ್ ಅಲರ್ಟ್ ಹಾಗೂ ತಿರುವನಂತಪುರಂ, ಕೊಲ್ಲಂ, ಅಲಪ್ಪುಜ್ಹಾ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ನೀಡಿದೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೭.೦೫ ಕ್ಕೆ **<>*><>**